ಕರ್ನಾಟಕ ಸರ್ಕಾರ

ಸಂಖ್ಯೆ: ಆರ್ ಡಿ 158 ಟಿಎನ್‌ಆರ್ 2019

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ: 26-03-2020

## ಆದೇಶ

ಕೋವಿಡ್-19 ಸಾಂಕ್ರಾಮಿಕ ರೋಗವನ್ನು ತಡೆಗಟ್ಟುವ ನಿಟ್ಟಿನಲ್ಲಿ ಗೃಹ ಮಂತ್ರಾಲಯವು ಆದೇಶ ಸಂಖ್ಯೆ: 40-3/2020-ಡಿ ದಿನಾಂಕ 24-3-2020ರಂದು ಹೊರಡಿಸಿರುವ ಮಾರ್ಗಸೂಚಿಗಳನ್ನು ಅನುಷ್ಠಾನ ಗೊಳಿಸುವ ಕುರಿತು ದಿನಾಂಕ 25-3-2020ರಂದು ನಡೆದ ರಾಜ್ಯ ಕಾರ್ಯಕಾರಿ ಸಮಿತಿ(SEC)ಯಲ್ಲಿ ಚರ್ಚಿಸಲಾಗಿದೆ. ರಾಜ್ಯ ಕಾರ್ಯಕಾರಿ ಸಮಿತಿ ಸಮಿತಿಯ ಪರ್ಯಾಲೋಚನೆಯನ್ವಯ, (1) ಬಿ.ಬಿ.ಎಂ.ಪಿ.ವ್ಯಾಪ್ತಿಯಲ್ಲಿ ಕೋವಿಡ್-19 ರ ಕಣ್ಗಾವಲಿನ ಉಸ್ತುವಾರಿ (2) ಬಿ.ಬಿ.ಎಂ.ಪಿ. ವ್ಯಾಪ್ತಿಯಲ್ಲಿ ಗೃಹ ಮಂತ್ರಾಲಯದ ಮಾರ್ಗಸೂಚಿಯಲ್ಲಿ ನಿಗದಿಪಡಿಸಿರುವಂತೆ ಸಾಮಾಜಿಕ ಅಂತರವನ್ನು ಕಾಯ್ದುಕೊಳ್ಳುವ ಕ್ರಮಗಳ ಮೇಲ್ವಿಚಾರಣೆ (3) ಬಿ.ಬಿ.ಎಂ.ಪಿ. ವ್ಯಾಪ್ತಿಯಲ್ಲಿ ಲಾಕ್ ಡೌನ್ ಅವದಿಯಲ್ಲಿ ಅಗತ್ಯ ವಸ್ತುಗಳ ಸರಬರಾಜು ವ್ಯವಸ್ಥೆ ಕ್ರಮಬದ್ಧವಾಗಿರುವುದನ್ನು ಖಚಿತಪಡಿಸಿ ಕೊಳ್ಳುವುದು – ಈ ಜವಾಬ್ದಾರಿಗಳನ್ನು ಅಪರ ಮುಖ್ಯ ಕಾರ್ಯದರ್ಶಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಇವರ ಮಾರ್ಗದರ್ಶನದಲ್ಲಿ ಈ ಕೆಳಗಿನ ಅಧಿಕಾರಿಗಳಿಗೆ ವಹಿಸಲಾಗಿದೆ:

| ಕ್ರ.ಸಂ. | ಅಧಿಕಾರಿಯ ಹೆಸರು & ಪದನಾಮ | ವಹಿಸಲಾದ ಬಿಬಿಎಂಪಿ ವಲಯ |
|---|---|---|
| 1 | **ಶ್ರೀ ಎಂ. ಮಹೇಶ್ವರ್‌ರಾವ್**, ಭಾಆಸೇ<br>ಸರ್ಕಾರದ ಪ್ರಧಾನ ಕಾರ್ಯದರ್ಶಿ,<br>ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ (ಎಂಎಸ್‌ಎಂಇ ಮತ್ತು ಗಣಿ) | ಪಶ್ಚಿಮ & ರಾಜರಾಜೇಶ್ವರಿ ನಗರ ವಲಯ |
| 2 | **ಶ್ರೀ ನವೀನ್‌ರಾಜ್ ಸಿಂಗ್**, ಭಾಆಸೇ<br>ವ್ಯವಸ್ಥಾಪಕ ನಿರ್ದೇಶಕರು,<br>ಕರ್ನಾಟಕ ಸ್ಟೇಟ್ ಮಿನರಲ್ ಕಾರ್ಪೊರೇಶನ್ ಲಿಮಿಟೆಡ್ | ದಕ್ಷಿಣ & ಬೊಮ್ಮನಹಳ್ಳಿ ವಲಯ |
| 3 | ಶ್ರೀ ಶ್ರೀಕರ್.ಎಂ.ಎಸ್. ಭಾಆಸೇ<br>ಆಯುಕ್ತರು, ವಾಣಿಜ್ಯ ತೆರಿಗೆ ಇಲಾಖೆ | ಯಲಹಂಕ & ದಾಸರಹಳ್ಳಿ ವಲಯ |
| 4 | **ಡಾ:ಎನ್.ಮಂಜುಳ**, ಭಾಆಸೇ<br>ವ್ಯವಸ್ಥಾಪಕ ನಿರ್ದೇಶಕರು,<br>ಕೆ.ಪಿ.ಟಿ.ಸಿ.ಎಲ್. | ಪೂರ್ವ & ಮಹಾದೇವಪುರ ವಲಯ |

ಮುಂದುವರೆದು, ಶ್ರೀ ರಾಜೇಂದ್ರ ಕುಮಾರ್ ಕಠಾರಿಯಾ, ಭಾ.ಆ.ಸೇ., ಸರ್ಕಾರದ ಕಾರ್ಯದರ್ಶಿ, ಕೃಷಿ ಇಲಾಖೆ, ಇವರನ್ನು ಲಾಕ್ ಡೌನ್ ಅವದಿಯಲ್ಲಿ ರಾಜ್ಯದಲ್ಲಿ ಆಹಾರ ಮತ್ತು ಸಾಗಾಣಿಕೆಯ ಸರಬರಾಜು ವ್ಯವಸ್ಥೆ ನಿರ್ವಹಣೆಯ ಮೇಲ್ವಿಚಾರಣೆ ಕೈಗೊಳ್ಳಲು ನೋಡಲ್ ಅಧಿಕಾರಿಯಾಗಿ ನೇಮಿಸಲಾಗಿದೆ.

ಈ ಆದೇಶವನ್ನು ವಿಪತ್ತು ನಿರ್ವಹಣಾ ಅಧಿನಿಯಮ, 2005ರ ಕಲಂ 22(2)(ಹೆಚ್)ರ ಅನ್ವಯ ಹೊರಡಿಸಲಾಗಿದೆ.

(ಸಹಿ)

**(ತ.ಮ. ವಿಜಯ ಭಾಸ್ಕರ್)**
ಮುಖ್ಯ ಕಾರ್ಯದರ್ಶಿ ಮತ್ತು ಅಧ್ಯಕ್ಷರು,
ರಾಜ್ಯ ಕಾರ್ಯಕಾರಿ ಸಮಿತಿ, ಕರ್ನಾಟಕ ರಾಜ್ಯ
ವಿಪತ್ತು ನಿರ್ವಹಣಾ ಪ್ರಾಧಿಕಾರ